**ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ. ಚನ್ನಪಟ್ಟಣ.**

**ಉಪಸ್ಥಿತರು: ಶ್ರೀಮತಿ ಉಷಾರಾಣಿ ಬಿ.ಎನ್.,** ಬಿ.ಎ ಎಲ್‌ಎಲ್.ಬಿ.,ಎಲ್ ಎಲ್ ಎಂ.,
**ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.**

**ದಿನಾಂಕ: 12 ನೇ ಜೂನ್ - 2024**

**ಎಫ್.ಡಿ.ಪಿ..7/2020**

ಅರ್ಜಿದಾರ : ಶ್ರೀಮತಿ.ಗೌರಮ್ಮ

-ವಿರುದ್ಧ-

ಎದುರುದಾರರು : ಶ್ರೀಮತಿ ನಾಗಮ್ಮ  ಮತ್ತು ಇತರರು

**ಮಧ್ಯಂತರ ಅರ್ಜಿ ಸಂಖ್ಯೆ: 8**

ಅರ್ಜಿದಾರರು/
ಎದುರುದಾರರು : ಶ್ರೀಮತಿ ನಾಗಮ್ಮ  ಮತ್ತು ಇತರರು
**(ಪ್ರತಿನಿಧಿಸುವವರು ಶ್ರೀ.ಎಸ್ ಎಸ್ ಎಸ್, ವಕೀಲರು)**

-ವಿರುದ್ಧ-

ಎದುರುದಾರರು/
ಅರ್ಜಿದಾರರು : ಶ್ರೀಮತಿ ಗೌರಮ್ಮ

**( ಪ್ರತಿನಿಧಿಸುವವರು ಶ್ರೀ.ಕೆಟಿಟಿ.ವಕೀಲರು)**

****

**ಮಧ್ಯಂತರ ಅರ್ಜಿ ಸಂಖ್ಯೆ:8 ರ ಮೇಲಿನ ಆದೇಶ:**

ಮಾನ್ಯ 3 ನೇ ಎದುರುದಾರರ ಪರ ವಕೀಲರು ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ.151 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ:8 ನ್ನು ಸಲ್ಲಿಸಿ, ಮೇಲ್ಮನವಿ ಸಂಖ್ಯೆ:44/2018 ರ ಮೇಲ್ಮನವಿ ಮಕ್ತಾಯವಾಗುವವರೆಗೆ ಈ ಎಫ್ ಡಿ  ಪಿ ಪ್ರಕರಣದ  ಎಲ್ಲಾ ಪ್ರಕ್ರಿಯೆಗಳನ್ನು ತಡೆಹಿಡಿಯಬೇಕೆಂದು ಕೋರಿರುತ್ತಾರೆ.

2. 3 ನೇ ಎದುರುದಾರರು ಈ ಮಧ್ಯಂತರ ಅರ್ಜಿಯ ಜೊತೆಗೆ ಪ್ರಮಾಣ ಪತ್ರವನ್ನು  ಪ್ರಮಾಣೀಕರಿಸಿ ಸಲ್ಲಿಸಿದ್ದು, ಅದರಲ್ಲಿ ಕಾರಣಗಳನ್ನು ತಿಳಿಸಿರುತ್ತಾರೆ.

ಅರ್ಜಿದಾರರು ಈ ಅರ್ಜಿಯನ್ನು ಅಸಲು ದಾವ ಸಂಃ 126/2009 ರ ಪ್ರಾಥಮಿಕ ಡಿಕ್ರಿಯ ಅನುಷ್ಠಾನ ಕೋರಿ ಅಂತಿಮ ಡಿಕ್ರಿ ಆದೇಶಕ್ಕಾಗಿ ಸಲ್ಲಿಸಿದ್ದು ಈಗಾಗಲೇ ಎದುರುದಾರರು ಸಲ್ಲಿಸಿರುವ ತಕರಾರನ್ನು ಈ ಅರ್ಜಿಯ ಅವಿಭಾಜ್ಯ ಅಂಗವೆಂದು ಪರಿಗಣಿಸಲು ಕೋರಿರುತ್ತಾರೆ. 3 ನೇ ಎದುರುದಾರರು ಅಸಲು ದಾವೆ ಸಂ ಃ 126/2009 ರ ತೀರ್ಪು ಮತ್ತು ಡಿಕ್ರಿಯ ವಿರುದ್ದ ಈಗಾಗಲೇ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿಯಲ್ಲಿ ಎಫ್ ಡಿ ಪಿ ವ್ಯವಹರಣೆಯನ್ನು ತಡೆಯುವಂತೆ ತಡೆಯಾಜ್ಞೆ ಕೋರಿ ಮದ್ಯಕಾಲೀನ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಮೇಲ್ಮನವಿಯು ಮಧ್ಯಕಾಲೀನ ಅರ್ಜಿಯ ಮೇಲೆ ತಕರಾರಿಗಾಗಿ ದಿ ಃ 20.03.2023 ಕ್ಕೆ ಮುಂದೂಡಲ್ಪಟ್ಟಿರುತ್ತದೆ. ಈ ನಡುವೆ ಅರ್ಜಿದಾರರು ಮದ್ಯಕಾಲೀನ ಅರ್ಜಿಯನ್ನು ಸಲ್ಲಿಸುವ ಮೂಲಕ ದಾವಾ ಸ್ವತ್ತುಗಳನ್ನು ಅಳತೆ ಮಾಡಲು ಕೋರಿ ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡುವಂತೆ ಅರ್ಜಿ ಸಲ್ಲಿಸಿರುವುದು ಸೂಕ್ತವಾಗಿರುವುದಿಲ್ಲ. ಮೇಲ್ಮನವಿಯನ್ನು ಸಲ್ಲಿಸಿದ ನಂತರ ಅರ್ಜಿದಾರರು ಈ ಅರ್ಜಿ ದಾವೆಯನ್ನು ಸಲ್ಲಿಸಿದ್ದು ಮೇಲ್ಮನವಿ ವಿಚಾರಣೆಗೆ ಬಾಕಿ ಇರುವ ವಿಚಾರ ಅರ್ಜಿದಾರರಿಗೆ ತಿಳಿದಿದ್ದರೂ ಸಹ ಅರ್ಜಿದಾರರು ತೊಂದರೆ ಕೊಡುವ ದುರುದ್ದೇಶದಿಂದ ನ್ಯಾಯಾಲಯ ನಿಯೋಗಿಯನ್ನು ನೇಮಕ ಮಾಡುವಂತೆ ಕೋರಿರುತ್ತಾರೆ. ಒಂದು ವೇಳೆ ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಿ ಆದೇಶವಾದ ಪಕ್ಷದಲ್ಲಿ ಎದುರುದಾರರು ಸಲ್ಲಿಸಿರುವ ಮೇಲ್ಮನವಿ ಊರ್ಜಿತವಾಗುವುದಿಲ್ಲ ಹಾಗೂ ಮೇಲ್ಮನವಿ ಬಾಕಿ ಇರುವಾಗ ಸದರಿ ಪ್ರಾಥಮಿಕ ಡಿಕ್ರಿಯನ್ನು ಜಾರಿಗೊಳಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಸದರಿ ಅರ್ಜಿಯನ್ನು ಪುರಸ್ಕರಿಸುವುದರಿಂದ ಅರ್ಜಿದಾರರಿಗೆ ಯಾವುದೇ ತೊಂದರೆ ಅಥವಾ ನಷ್ಟ ಉಂಟಾಗುವುದಿಲ್ಲ, ಒಂದು ವೇಳೆ ತಿರಸ್ಕರಿಸಿದಲ್ಲಿ ತುಂಬಲಾರದ ನಷ್ಟ ಉಂಟಾಗುತ್ತದೆ . ಆದ್ದರಿಂದ ಸದರಿ ದಾವೆಯಲ್ಲಿ ತೀರ್ಪು ಬರುವವರೆಗೆ ಈ ಪ್ರಕರಣದಲ್ಲಿ ಪ್ರಕ್ರಿಯೆ ನಡೆಯದಂತೆ ತಡೆಹಿಡಿಯುವುದು ಅಗತ್ಯವಾಗಿರುತ್ತದೆ. **ಆದ್ದರಿಂದ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದು, ಅದನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.**

3. ಮಾನ್ಯ ಅರ್ಜಿದಾರರ ಪರ ವಕೀಲರು ಈ ಮಧ್ಯಂತರ ಅರ್ಜಿಗೆ ತಮ್ಮ ತಕರಾರನ್ನು ಸಲ್ಲಿಸಿದ್ದು ಅದರಲ್ಲಿ ಎದುರುದಾರರು ಸಲ್ಲಿಸಿರುವ ಅರ್ಜಿಯು ಕಾನೂನು ಪ್ರಕಾರ ಊರ್ಜಿತವಾಗಿರುವುದಿಲ್ಲವೆಂದು ವಜಾಕರಿಸಲು ಯೋಗ್ಯವಾಗಿರುವುದೆಂದು ತಿಳಿಸಿರುತ್ತಾರೆ. ಅರ್ಜಿದಾರರು ಮುಂದುವರೆದು, ತಿಳಿಸಿರುವುದು ಏನೆಂದರೆ ಈಗಾಗಲೇ ನ್ಯಾಯಾಲಯವು

1/10 ನೇ ಭಾಗವನ್ನು ಡಿಕ್ರಿ ಮಾಡಿದ್ದು, ಅದರಂತೆ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿದ್ದು ನ್ಾಯಯಾಲಯದ ನಿಯೋಗಿಯನ್ನು ನೇಮಕ ಮಾಡಲು ಅರ್ಜಿಯನ್ನು ಸಲ್ಲಿಸಿ ಅದರ ವಾದ ಮಂಡನೆಗೆಂದು ಕಾಯ್ದಿರಿಸಿದ ಹಂತದಲ್ಲಿ ಇರುವಾಗ ಎದುರುದಾರರ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುವುದು ಊರ್ಜಿತವಾಗಿರುವುದಿಲ್ಲ ಮತ್ತು ಯಾವುದೇ ಸಕಾರಣಗಳನ್ನು ನೀಡದ ಕಾರಣ **ಸದರಿ ಅರ್ಜಿಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ಕೋರಿರುತ್ತಾರೆ.**

4. ಈ ಮಧ್ಯಂತರ ಅರ್ಜಿಯನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆಃ-

**ಃ<u>ಅಂಶಗಳುಃ</u>**

1. **ಎದುರುದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆಃ8 ಪುರಸ್ಕಾರಗೊಳ್ಳಲು ಯೋಗ್ಯವಾಗಿದೆಯೇ?**
2. **ಮಾಡುವ ಆದೇಶ ಏನು?**

5. ಉಭಯ ಪಕ್ಷಗಾರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಈ ನ್ಯಾಯಾಲಯವು ಕಡತಗಳಲ್ಲಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಿರುತ್ತದೆ ಮತ್ತು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಂದ ಈ ಕೆಳಕಂಡಂತೆ ಉತ್ತರಿಸಿದೆ.

**ಅಂಶ ಸಂಖ್ಯೆ1 ಃ ನಕಾರಾತ್ಮಕವಾಗಿ**
**ಅಂಶ ಸಂಖ್ಯೆ2 ಃ ಅಂತಿಮ ಆದೇಶದಂತೆ ಈ**
**ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ,**

**<u>ಕಾರಣಗಳು</u>**

7. **<u>ಅಂಶ ಸಂಖ್ಯೆಃ1ಃ</u>** ಅರ್ಜಿದಾರರು ಅಸಲು ದಾವಾ ಸಂಖ್ಯೆಃ126/2009 ರಲ್ಲಿ ಮಾಡಿದ ಪ್ರಾಥಮಿಕ ಡಿಕ್ರಿಯ ಆಧಾರದ ಮೇಲೆ ಅಂತಿಮ ಡಿಕ್ರಿಗಾಗಿ ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ಮೇಲ್ಮನವಿ ಸಂ ಃ 44/2018 ಮುಕ್ತಾಯವಾಗುವವರೆಗೆ ಎಫ್ ಡಿ ಪಿ ಪ್ರಕರಣದ ಎಲ್ಲಾ ಪ್ರಕ್ರಿಯೆಗಳನ್ನು ತಡೆಹಿಡಿಯುವಂತೆ ಕೋರಿರುತ್ತಾರೆ. ಆದರೆ ಎಲ್ಲಾ ವ್ಯವಹರಣೆಗಳನ್ನು ತಡೆಹಿಡಿಯಲು ಯಾವುದೇ ತಡೆಯಾಜ್ಞೆ ನೀಡಿರುವುದಿಲ್ಲ. ಆದ್ದರಿಂದ ಎದುರುದಾರರು ಸಲ್ಲಿಸಿರುವ ಈ ಅರ್ಜಿಯು ಕಾನೂನು ಪ್ರಕಾರ ಊರ್ಜಿತವಾಗಿರುವುದಿಲ್ಲ ಎಂದು **ಈ ನ್ಯಾಯಾಲಯವು**

**ಅಭಿಪ್ರಾಯಪಟ್ಟು ಅಂಶ ಸಂಖ್ಯೆ:1 ನ್ನು ನಕಾರಾತ್ಮಕವಾಗಿ ಉತ್ತರಿಸಿದೆ.**

8. **<u>ಅಂಶ ಸಂಖ್ಯೆ:2:-</u>** ಈ ಮೇಲ್ಕಂಡ 1 ನೇ ಅಂಶಗಳಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

**<u>ಆದೇಶ</u>**

**ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ.151 ರಂತೆ ಎದುರುದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ:8 ನ್ನು ವಜಾಗೊಳಿಸಲಾಗಿದೆ.**

(ಬೆರಳಚ್ಚು ನಕಲುಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, **2024** ನೇ ಇಸವಿ ಜೂನ್ **12** ನೇ ದಿನಾಂಕದಂದು ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಲಾಯಿತು.)

**(ಉಷಾರಾಣಿ ಬಿ.ಎನ್.)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ. ಎಫ್? ಸಿ., ಚನ್ನಪಟ್ಟಣ.**

<u>ಮುಕ್ತ ನ್ಯಾಯಾಲಯದಲ್ಲಿ ಆದೇಶ ಉಚ್ಚರಿಸಲಾಗುತ್ತದೆ</u>
<u>(ಪ್ರತ್ಯೇಕ ಆದೇಶ ಹಾಳೆಯನ್ನು ವೀಕ್ಷಿಸಿ)</u>

**<u>ಆದೇಶ</u>**

**ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ.151 ರಂತೆ ಎದುರುದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ:8 ನ್ನು ವಜಾಗೊಳಿಸಲಾಗಿದೆ.**

**To hear on IA No.VII.**

**Call on 03.07.2024.**

ಅಪರ ಸಿವಿಲ್? ನ್ಯಾಯಾಧೀಶರು ಮತ್ತು
ಜೆ .ಎಂ. ಎಫ್? ಸಿ., ಚನ್ನಪಟ್ಟಣ.